

ಮುಂಗಾರಿನೊಂದಿಗೆ ‘ವಿಶ್ವ ಪರಿಸರ ದಿನ’ದ ಸಂಭ್ರಮವೂ ಮಿಳಿತಗೊಳ್ಳುವ ಜೂನ್ ಪ್ರಕೃತಿಪ್ರಿಯರಿಗೆ ಸೌಂದರ್ಯ ಸಂಪುಟದ ಮೊದಲ ಪುಟ ತೆರೆಯುವ ತಿಂಗಳು. ಈ ಮಳೆ ಸಂಭ್ರಮ ಹಾಗೂ ಹಸಿರು ಹಬ್ಬದ ಸೊಗಸು ‘ಸುಧಾ’ದ ಈ ಸಂಚಿಕೆಯ ವಿಶೇಷ. ವಿಶ್ವದ ಬಹು ಅಮೂಲ್ಯ ಪ್ರದೇಶಗಳಲ್ಲೊಂದಾದ ಗುನುಂಗ್ ಪದಾಂಗ್ ಕುರಿತ ಬರಹ, ಪ್ರಕೃತಿಯ ಬೆರಗು–ಬೆಡಗುಗಳ ಜೊತೆಗೆ ಮನುಷ್ಯನ ನಿರಂತರ ಹುಡುಕಾಟದ ಪ್ರವೃತ್ತಿಯನ್ನೂ ಸಹೃದಯರ ಗಮನಕ್ಕೆ ತರುವಂತಿದೆ. ಕನ್ನಡದಲ್ಲಿದು ಗುನುಂಗ್ ಪದಾಂಗ್ ಕುರಿತ ಮೊದಲ ಸಚಿತ್ರ ಕಥನ.